**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ .ಎಂ. ಎಫ್. ಸಿ ನ್ಯಾಯಾಲಯ ಸಿಂದಗಿ**

ಸಿ.ಸಿ.ನಂಬರ್ : 266/2024

ಪಿ.ಡಬ್ಲ್ಯೂ : 3 ಸಿ.ಡಬ್ಲ್ಯೂ 6

| | | |
|---|---|---|
| ಸಾಕ್ಷಿದಾರರ ಹೆಸರು | : | ಮಂಜುನಾಥ ದಳವಾಯಿ |
| ತಂದೆಯ ಹೆಸರು | : | ಕಲ್ಲಪ್ಪ |
| ವಯಸ್ಸು | : | 27 ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸಸ್ಥಳ | : | ನಿವಾಳಖೇಡ |
| ಸಮಯ | : | 3.45 |

ಸಾಕ್ಷಿಗೆ ಇಂದು ದಿನಾಂಕಃ 17-07-2026 ರಂದು ಪ್ರಮಾಣೀಕರಿಸಲಾಯಿತು.

**ಮುಖ್ಯವಿಚಾರಣೆಃ ಎ.ಪಿ.ಪಿ. ರವರಿಂದ**

ಚಾ ಸಾ 1 ನನ್ನ ಅತ್ತಿಗೆ. ಚಾ ಸಾ 7 ನನ್ನ ತಂದೆ. ಚಾ ಸಾ 8 ನನ್ನ ಚಿಕ್ಕಪ್ಪ. ಚಾ ಸಾ 9 ರಿಂದ 12 ರವರ ಪರಚಯ ಇಲ್ಲ. ನನಗೆ ಪ್ರಕರಣದ ಬಗ್ಗೆ ಮಾಹಿತಿ ಇರುವುದಿಲ್ಲ. ನಮ್ಮ ತಂದೆ 4 ಜನ ಮಕ್ಕಳಿದ್ದು ನನ್ನ ಸೇರಿ ಶಿವಾನಂದ , ನರಸಮ್ಮ ಮತ್ತು ಜ್ಯೋತಿ ಎಂದು ಇರುತ್ತಾರೆ. ಕಳೆದ 3 ವರ್ಷಗಳ ಹಿಂದೆ ನನ್ನ ಅಣ್ಣ ರಸ್ತೆ ಅಪಘಾತದಲ್ಲಿ ಮೃತಪಟ್ಟಿರುತ್ತಾರೆ. ಅಪಘಾತ ಹೇಗೆ ಮತ್ತು ಯಾರ ತಪ್ಪಿನಿಂದ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಪೋಲಿಸರ ಮುಂದೆ ನಾನು ಯಾವುದೇ ಹೇಳಿಕೆ ಮತ್ತು ಪುನಃ ಹೇಳಿಕೆ ನೀಡಿರುವುದಿಲ್ಲ.

**(ಈ ಹಂತದಲ್ಲಿ ಎ.ಪಿ.ಪಿ. ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೇಳಿರುತ್ತಾರೆ, ಅನುಮತಿ ನೀಡಲಾಯಿತು).**

**ಪಾಟೀಸವಾಲುಃ ಎ.ಪಿ.ಪಿ. ರವರಿಂದಃ**

ದಿನಾಂಕ 19-10-2023 ರಂದು ನಾನು ಪೋಲಿಸರಿಗೆ ನೀಡಿರುವ ಹೇಳಿಕೆ ಏನೆಂದರೆ ದಿನಾಂಕ 18-10-2023 ರಂದು ಮದ್ಯಾಹ್ನ 3 ಗಂಟೆಗೆ ನನ್ನ ಅಣ್ಣ ತಮ್ಮ ಮಾವನಿಗೆ ಭೇಟಿ ಆಗಿ ಸಂಜೆ ಬರುತ್ತೇನೆ ಎಂದು ಹೇಳಿ ದ್ವಿ ಚಕ್ರ ವಾಹನ ನಂಬರ ಕೆಎ/28/ಎಚ/3714 ರ ಮೇಲೆ ನಿವಾಳಖೇಡದಿಂದ ತಾಂಬಾಕ್ಕೆ ಹೋಗಿದ್ದು ಸಾಯಂಕಾಲ 7.30 ಗಂಟೆಗೆ ಚಾ ಸಾ 1 ರವರ ಮೊಬೈಲಗೆ ನನ್ನ ಅಣ್ಣನ ಮೊಬೈಲನಿಂದ ಪೋನ್ ಬಂದುಸದರಿಯವರಿಗೆ ಚಿಕ್ಕರೂಗಿ ಅಡಿವಿ ಬಸವಣ್ಣ ಗುಡಿಯ ಹತ್ತಿರ ಅಪಘಾತವಾಗಿ ಭಾರಿ ಗಾಯ ಆಗಿ ಸ್ಥಳದಲ್ಲಿಯೇ ಮೃತಪಟ್ಟಿರುವುದಾಗಿ ತಿಳಿಸಿರುತ್ತಾರೆ. ನಾನು ಚಾ ಸಾ 1, ಚಾ ಸಾ 7 ಮತ್ತು 8 ರವರು ಸ್ಥಳಕ್ಕೆ ಖಾಸಗಿ ವಾಹನ ಮಾಡಿಕೊಂಡು ಸ್ಥಳಕ್ಕೆ ಹೋಗಿ ನೋಡಲಾಗಿ ನಮ್ಮ ಅಣ್ಣ ಮೃತಪಟ್ಟಿದ್ದು ಅವರಿಗೆ ತಲೆಗೆ ಮುಖಕ್ಕೆ ಎದೆಗೆ ಭಾರಿ ಗಾಯವಾಗಿದ್ದು ನಂತರ ಸ್ಥಳೀಯರುನ್ನು ವಿಚಾರಿಸಲಾಗಿ ಸಂಜೆ 7 ಗಂಟೆಗೆ ಟ್ರ್ಯಾಕ್ಟರ ಚಾಲಕನ ತನ್ನ ವಾಹನವನ್ನು ಚಿಕ್ಕರೂಗಿ ಕಡೆಯಿಂದ ತಾಂಬಾದ ಕಡೆಗೆ ಅತೀ ವೇಗ ಮತ್ತು ನಿಸ್ಕಾಳಜಿತನದಿಂದ ಚಾಲನೆ ಮಾಡಿಕೊಂಡು ಬಂದು ದ್ವಿ ಚಕ್ರ ವಾಹನದ ಸವಾರನಿಗೆ ಎದುರುನಿಂದ ಡಿಕ್ಕಿಪಡಿಸಿ ಅಪಘಾತಪಡಿಸಿರುತ್ತಾರೆ ಎಂದು ಗೊತ್ತಾಗಿದೆ ಎಂದರೆ ಸರಿಯಲ್ಲ. ಅಪಘಾತಪಡಿಸಿದ ವಾಹನ ನಂಬರ ಕೆಎ/28/ಟಿಇ/7134 ಅಂತಾ ಇದ್ದು ನಂತರ ನಮ್ಮ ಅಣ್ಣ ಶವ ಸಿಂದಗಿ ಶವಗಾರಕ್ಕೆ ತೆಗೆದುಕೊಂಡು ಹೋಗಲಾಯಿತು. ಟ್ರ್ಯಾಕ್ಟರ ಚಾಲಕನ ಓಡಿ ಹೋಗಿದ್ದು ಅಪಘಾತ ಆತನ ತಪ್ಪಿನಿಂದ ಆಗಿರುತ್ತದೆ ಎಂದು ಚಾ ಸಾ 1 ರವರು ದೂರನ್ನು

ನೀಡಿದ್ದು ಈ ಮೇಲಿನಂತೆ  ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ನಿರಾಕಾರಿಸಿದ ಹೇಳಿಕೆ ಭಾಗವನ್ನು ನಿಪಿ 7 ಎಂದು ಗುರುತಿಸಲಾಯಿತು. ನನಗೆ ನಿಪಿ 7 ರ ವಿಷಯ ಗೊತ್ತಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಿ 10-11-2023 ರಂದು ಅಪಘಾತಪಡಿಸಿ ವಾಹನ ಹಾಗೂ ಆರೋಪಿತನಾದ ಸಾಹೇಬಗೌಡ ಕೊಡೆಕಲ್ ತೆ ೋರಿಸಿ ಪುನಃ ಹೇಳಿಕೆ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ನಿರಾಕಾರಿಸಿದ ಹೇಳಿಕೆ ಭಾಗವನ್ನು ನಿಪಿ 8 ಎಂದು ಗುರುತಿಸಲಾಯಿತು.  ನಿಪಿ 5 ರಂತೆ ಘಟನಾ ಜಾಗೆ ಪಂಚನಾಮೆ ಪೋಲಿಸರಿಗೆ ತೋರಿಸಿರುತ್ತೇನೆ ಎಂದರೆ ಸರಿಯಲ್ಲ. ನನಗೆ ನಿಪಿ 5 ರಿಂದ 8 ರ ವಿಷಯ ಗೊತ್ತಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.  ಸಾಕ್ಷಿಗೆ ನಿಪಿ 5 ಮತ್ತು 6 ತೋರಿಸಲು ನೋಡಿ ಗುರುತಿಸಿದ್ದು  ಸಹಿಯನ್ನು ನಿಪಿ 5 ಬಿ  ಮತ್ತು 6 ಬಿ ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಃ  ಆರೋಪಿತರ ಪರ ವಕೀಲರು ಯಾವುದೇ ಪಾಟೀಸವಾಲು ಇಲ್ಲ ಎಂದಿದ್ದರಿಂದ ಪಾಟೀಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

**ಮರು ವಿಚಾರಣೆಃ ಇಲ್ಲ.**

(ಸಾಕ್ಷಿಯ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಅದೆ.

ಸಿವಿಲ್ ನ್ಯಾಯಾಧೀಶರು ವ
ಜೆ ಎಂ ಎಫ್ ಸಿ, ಸಿಂದಗಿ.